T.P-200
TP-4

Regd No M 1299 34 th Year ತಾ|| 12—5—51

SATYAVADI



ಸಂಪಾದಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಕಾಂಗ್ರೆಸಿನಿಂದ- ಡೆಮೊಕ್ರಾಟ್ ಫ್ರಂಟಿನವರು ಸಿಡಿವುದು ನಿಶ್ಚಿತ !

ಮೈಸೂರ್‌ನಲ್ಲಿ ಮಂತ್ರಿ ಕೆಲಸ ಖಾಲಿ ಇಲ್ಲ !

ಭಾರತ ಕಾಂಗ್ರೆಸಿನಿಂದ ಡೆಮೊಕ್ರಾಟಿಕ್ ಫ್ರಂಟಿನ ಸದಸ್ಯರುಗಳು ಸಿಡಿದು ಬಂದು ನೂತನ ರಾಜಕೀಯ ಪಕ್ಷವನ್ನು ಸ್ಥಾಪಿಸುವರೆಂದು ಕೇಳ್ದ ಕಾಂಗ್ರೆಸಿನ ಮುಂದಾಳು ಶ್ರೀ ಕೇಳಪ್ಪ ಮದರಾಸಿನಲ್ಲಿ ನಿನ್ನೆ ತಿಳಿಸಿದ್ದಾರೆ. ಫ್ರಂಟಿನವರಿಗೂ ಕಾಂಗ್ರೆಸಿನ ನಾಯಕರಿಗೂ ಆದ ಸಂಧಾನ ಸಂತೃಪ್ತವಾದ ಫಲ ನೀಡಲಿಲ್ಲವೆಂದು ಶ್ರೀ ಕೇಳಪ್ಪ ತಿಳಿಸಿದ್ದಾರೆ ಬರುವ ತಿಂಗಳ ಮಧ್ಯೆ ಪಾಟ್ನದಲ್ಲಿ ನಾನಾ ಸಂಸ್ಥಾನಗಳ ಪ್ರತಿನಿಧಿಗಳು ಸೇರಿ ಹೊಸ ಪಕ್ಷದ ಘಟನೆ ಹಾಗೂ ಚುನಾವಣಾ ಘೋಷಣೆಯನ್ನು ಬರೆಯುತ್ತಾರೆ

ಬೆಂಗಳೂರಿನಲ್ಲಿ ಶಾಲೆ

ಬೆಂಗಳೂರಿನಲ್ಲಿ ಆಕಾರ ಕಚೇರಿ ಕೆಲಸ ಕಲಿಕೆಗಾಗಿ ಶಾಲೆ ಸ್ಥಾಪನೆಯಾಗ್ತಿದೆ

ಚೇತನಗೊಳ್ಳುತ್ತಿರುವರು

ಕೊರಿಯ ಯುದ್ಧಾಂಗಣದಲ್ಲಿ ಕಮ್ಯುನಿಸ್ಟುಗಳು ಚೇತನಗೊಂಡಿದ್ದಾರೆಂದು ಟೊಕಿಯೊ ವಾರ್ತೆ

ನಾಗಪುರದಲ್ಲಿ ರಾತ್ರಿ ವೇಳೆ ಚಲಿಸುವ ಆಜ್ಞೆ ವ್ಯವಸ್ಥೆ ಚನ್ನಾಗಿ ನಡೆಯುತ್ತಿದೆಯೆಂದು ದೆಹಲಿ ವಾರ್ತೆ.

ಮಧ್ಯ ಬೊಂಬಾಯಿನಲ್ಲಿ ನಿನ್ನೆ ಎರಡು ಇರಿತಗಳು ಆದವು 12 ಮಂದಿ ಬಂಧಿಸಲ್ಪಟ್ಟರು

ಇನ್ನೊಂದು ವಾರದಲ್ಲಿ ಮೈಸೂರು ರಾಜ್ಯ ಸಚಿವ ಮಂಡಲ ವಿಸ್ತರಣೆ ಬಗೆಗೆ ಪೂರ್ಣವಾಗಿ ಗೊತ್ತಾಗುವದೆಂದು ಶ್ರೀ ಕೆ. ಚೆರೆಡ್ಡಿ ತಿಳಿಸಿರುವರು ಸಚಿವ ಮಂಡಲದಲ್ಲಿ ಕೆಲಸ ಖಾಲಿ ಇಲ್ಲವೆಂದು ಸಹಾ ಅವರು ತಿಳಿಸಿರುವರು

ಆಸ್ಟ್ರೇಲಿಯದ ವಿದೇಶ ವ್ಯವಹಾರಗಳ ಸಚಿವ ಕ್ಯಾನೆಯವರು ವೆಲ್ಲಿಂಗ್ಟನ್ನಲ್ಲಿ ಹೊರಡಿಸಿದ ಹೇಳಿಕೆಯಲ್ಲಿ ಭಾರತದ ಬರ ತಡೆಯಲು ಧಾನ್ಯ ಕಳುಹಲು ಸಿದ್ಧವಿರುವದಾಗಿ ವ್ಯಕ್ತಪಡಿಸಿರುವರು.

ಭಾರತದ ರಾಷ್ಟ್ರಾಧಿಪತಿ ಡಾ|| ಪ್ರಸಾದರು ನಿನ್ನೆ ಬೆಳಿಗ್ಗೆ 9-47 ಗಂಟೆಗೆ ಪ್ರಭಾಸ್ ಪಟ್ಟಣದಲ್ಲಿ ಸೋಮನಾಥ ದೇವಾಲಯದಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಿದರು. ನೂರೊಂದು ಗುಂಡುಗಳು ಹಾರಿದವು. ಲಕ್ಷಾಂತರ ಮುಂದಿ ಭಕ್ತಾದಿಗಳು ಆಗಮಿಸಿದ್ದರು. ವೇದ ಘೋಷ ಮುಂತಾದುವು ವೈಭವದಿಂದ ನೆರವೇರಿದವು.

ಟಿ. ನರಸೀಪುರದ ವಿದ್ಯೋದಯ ಹೈಸ್ಕೂಲಿನ ನೂತನ ಕಟ್ಟಡದ ಉದ್ಘಾಟನೋತ್ಸವವನ್ನು ಶ್ರೀಮನ್ಮಹಾರಾಜರವರು ನೆರವೇರಿಸಲಿರುವರು.

ಬೆಂಗಳೂರು ಕೇಂದ್ರ ಬ್ರಾಡ್‌ಕಾಸ್ಟಿಂಗ್ ಕಛೇರಿಯಲ್ಲಿ ಬಟ್ಟೆ ತಯಾರು ಮಾಡುವ ಯೋಜನೆಯನ್ನು ಸರ್ಕಾರ ಹೊಂದಿದೆ

ಸುಬ್ಬರಾಯರವರ ರಾಜೀನಾಮೆಗೆ ವ್ಯಥೆ

ಇಂಡೋನೇಷಿಯದಲ್ಲಿ ಭಾರತ ರಾಯಭಾರಿಯಾಗಿರುವ ಡಾ|| ಪಿ. ಸುಬ್ಬರಾಯರ್‌ರವರು ಅವರ ಸ್ಥಾನಕ್ಕೆ ರಾಜೀನಾಮೆ ಕೊಡಲಿರುವದು ತಮಗೆ ವ್ಯಥೆಯುಂಟು ಮಾಡಿದೆಯೆಂದು ಸರ್ ವಿ. ಟಿ. ಎಂ ಇಸ್ಮಾಯಿಲ್‌ರವರು ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

ವಾರ್ತೆಗಳು

ವಿಜ್ಞಾನ ಸಂಶೋಧನ ಸಚಿವ ಶ್ರೀ ಪ್ರಕಾಶರವರು ಇದೇ ತಾ|| 22 ರಲ್ಲಿ ಬೆಂಗಳೂರಿಗೆ ಬರುವರು. 6 ದಿವಸ ಸಂಸ್ಥಾನದ ಕಾರ್ಯಕ್ರಮಗಳನ್ನಿಟ್ಟುಕೊಂಡಿರುವರು ಮೈಸೂರಿನಲ್ಲಿರುವ ಆಹಾರ ಸಂಶೋಧನಾಲಯಕ್ಕೂ ಭೇಟಿಕೊಡುವರು.

ಜಿನೀವಾದಲ್ಲಿ ಸಮಾನೇಶವಾಗಿರುವ ಮಾನವ ಹಕ್ಕುಬಾಧ್ಯತಾ ಸಂಮೇಳನದವರು ಸದಸ್ಯ ರಾಜ್ಯಗಳಲ್ಲಿರುವ ಬರ ರೋಗ, ಅಜ್ಞಾನ ಮತ್ತು ರಕ್ಷಣೆ ಇಲ್ಲದಿರುವಿಕೆ ಇವುಗಳೊಡನೆ ಹೋರಾಡಬೇಕೆಂದು ನಿನ್ನೆ ಪ್ರತಿಜ್ಞೆ ಮಾಡಿದರು.

ಇದೇ 1 ನೇ ತಾ|| ಸಂಜೆ 7 ಗಂಟೆಯಲ್ಲಿ ಪಾಕಿಸ್ತಾನ ಸೇನೆಗಳು ಅಫ್ಘಾನಿಸ್ತಾನದ ಮೇಲೆ ಧಾಳಿ ಮಾಡಿದವೆಂದು ದೆಹಲಿ ವಾರ್ತೆ

ಕೆಂಪು ಚೀನಾವಿಗೆ ಟಬ್ಬರ್ ಸರಬರಾಜು ಮಾಡುವದನ್ನು ಸಿಲೋನ್ ನಿಷೇಧಿಸಲಾರದೆಂದು ಕೊಲಂಬೊ ವರದಿ

ಭಾರತ ರಾಜ್ಯಾಂಗವನ್ನು ತಿದ್ದುಪಡಿ ಮಾಡುವ ಕಾನೂನನ್ನು ಪಂ|| ನೆಹ್ರು ಮಂಡಿಸುವ ದಿನ ಇಂದು

ಮಿತ್ರ ರಾಜ್ಯಗಳಿಗೆ ನ್ಯೂಸ್‌ಪ್ರಿಂಟ್ ಸರಬರಾಜು ಮಾಡುವ ತಾತ್ಕಾಲಿಕ ಯೋಜನೆಯನ್ನು ಅನೇರಿಕ ಸರ್ಕಾರ ಮಾಡಿರುವದಾಗಿ ವಾಷಿಂಗ್ಟನ್ ವಾರ್ತೆ ಸಹಾಯಕ್ಕೆ ಅರ್ಹವಿರುವ ರಾಷ್ಟ್ರಗಳಿಂದರೆ ಕಮ್ಯುನಿಸ್ಟ್ ಆಕ್ರಮಣ ಬೆದರಿಕೆ ಪ್ರದೇಶಗಳು.

× ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದಿಂದ ಶ್ರೀ ಕಾಮತ್‌ರನ್ನು ಹೊರದೂಡದೆ ಎಚ್ಚರಿಕೆ ಕೊಡಲಾಗುವದೆಂದು ದೆಹಲಿ ವಾರ್ತೆ

× ತಮ್ಮ ಪ್ರಚಾರಕ್ಕಾಗಿ ರಷ್ಯ ಚೀನಗಳು ಭಾರತಕ್ಕೆ ಆಹಾರವನ್ನಿತ್ತಿದೆಯೆಂದು ಅಮೇರಿಕ ಹಂಚಿಕೆ ಹೇಳಿಕೆ.

ಭಾರತದಲ್ಲಿ ರೈಲ್ವೆ ಅನಾಹುತಗಳು

ಬಿಲಾಸ್ಪುರಿನಲ್ಲಿ ಕಲ್ಕತ್ತ-ಬೊಂಬಾಯಿ ಮೈಲಿಗೆ ಬೆಂಕಿ ಬಿದ್ದು ನಿನ್ನೆ 4 ಮಂದಿ ಸತ್ತು 10 ವಂದಿ ಗಾಯಗೊಂಡಿದ್ದಾರೆಂದು ನಾಗಪುರ'ನ ವಾರ್ತೆ

ಉತ್ತರ ಬಿಹಾರಿನಲ್ಲಿ ನಿನ್ನೆ ಸಂಜೆ ರೈಲ್ವೆ ಅನಾಹುತ ದರ್ಘಾಂಗ ನಿಲ್ದಾಣ ಒಳ ನಡೆದು 11 ಮಂದಿ ಸತ್ತು ಅಷ್ಟೆ ಮಂದಿ ಗಾಯಗೊಂಡರೆಂದು ಪಾಟ್ನಾ ವಾರ್ತೆ

ಜುಹು ರೈಲ್ವೆ ಯಾರ್ಡಿನಲ್ಲಿ ಮೂರು ಸಹಸ್ರ ರೂ. ಮೌಲ್ಯದ ಬೆಂಕಿಕಡ್ಡಿಗಳಿದ್ದ ವ್ಯಾಗನ್ನು ಬೆಂಕಿ ಅನಾಹುತದಿಂದ ನಿನ್ನೆ ಭಸ್ಮವಾದ ವಾರ್ತೆ ಕಾನ್ಪುರದಿಂದ ಬಂದಿದೆ.

ಶ್ರೀಕೃಷ್ಣನ ಸ್ಮಾರಕ

ಸೌರಾಷ್ಟ್ರ ರಾಜಪ್ರಮುಖರಾದ ನವನಗರ ಜಾಂ ಸಾಹೇಬರು ನಿನ್ನೆ ಶ್ರೀ ಕೃಷ್ಣ ಪರಮಾತ್ಮನ ಅಮರನಾದ ದೇಹ ತ್ಯಾಗದಲ್ಲಿ ಸ್ಮಾರಕ ಶಿಲಾಸ್ಥಾಪನ ಮಹೋತ್ಸವವನ್ನು ನೆರವೇರಿಸಿದರೆಂದು ಪ್ರಭಾಸ್‌ಪಟ್ಟಣ ವಾರ್ತೆ. ಸ್ಮಾರಕ ಮಂಟಪ ರೀತಿಯದ್ದು ಭಗವದ್ಗೀತೆ ಬರೆಯಲಾಗುವದು

ಮಜರೆ ಹನುಮಪ್ಪನವರದಲ್ಲಿ ನೀರಿನ ಕಾಲುವೆ ಅಗೆಯುತ್ತಿದ್ದಾಗ ಪ್ರಾಚೀನ ಭಂಗಾರದ ನಾಣ್ಯಗಳು ದೊರೆತಿರುವದಾಗಿ ಚಿತ್ರದುರ್ಗ ವಾರ್ತೆ. ಹನ ಮಾಪ್ಪಂ ಮೊಳಕಾಲ್ಮೂರು ಸಿದ್ಧಾಪುರದಲ್ಲಿದೆ

ಬೊಂಬಾಯಿನ ಲಾಯಿಡ್ಸ್ ಬ್ಯಾಂಕಿನಲ್ಲಿ ಇತ್ತೀಚಿಗೆ ಡಕಾಯಿತಿ ನಡೆಯಿತಷ್ಟೆ. ದೆಹಲಿಯಲ್ಲಿ ಈರ್ವರು ಆ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಆ ಪೈಕಿ ಓರ್ವ ಮೊನ್ನೆ ತಾನೇ ವಿವಾಹವಾದ.

ಮುಂದಿನ ವರ್ಷದ ಮಧ್ಯಭಾಗದಲ್ಲಿ ಭಾರತ ಜನಗಣತಿ ಕಾರ್ಯಗಳು ಮುಗಿಯುವವು ಈ ವರ್ಷದ ಜನಗಣತಿಗೆ ಒಂದೂವರೆ ಕೋಟಿ ರೂ. ವೆಚ್ಚದ ಅಂದಾಜಾಗಿದೆ.

ಬಿಹಾರ ಸರ್ಕಾರ'ಅಲ್ಲಿನ ಕಾಮ್ಲಮ ನಾಸ್ಯ-ಪ್ರದೇಶದಲ್ಲಿ ಸಾಂಕ್ರಾಮಿಕ ಕಡೆಗಟ್ಟಲು ಸದಿಸೆಂಟು ಲಕ್ಷ ರೂ. ವೈದ್ಯಕೀಯ ಯೋಜನೆಯನ್ನು ತಯಾರಿಸಿರುವದಾಗಿ ಪಾಟ್ನ ವಾರ್ತೆ.

ಮಾನವನ ಒಂದು ವರ್ಷದ ಕಾರ್ಯ

ಆಲ್ಫೆಡ್ ಅರ್ಕಾಸ್‌ರವರು ಹೀಗೆ ಹೇಳಿದ್ದಾರೆ— ಪ್ರತಿ ಮನುಷ್ಯನೂ ಒಂದು ವರ್ಷದಲ್ಲಿ 118 ಲಕ್ಷ ಪದಗಳನ್ನು ಚ್ಚರಿಸುತ್ತಾನೆ 1200 ಬಾರಿ ಸೇಕ್ ಹ್ಯಾಂಡು ಕೊಡುತ್ತಾನೆ (ಈ ಶಕ್ತಿಯು ಎಂಟು ಟನ್ನುಗಳ ಇಂಜನ್ನು ಮೇಲ ಕ್ಕೆತ್ತಲು ಸಾಕಾಗುತ್ತದೆ) ಕಣ್ಣು ಎರೆಗಳನ್ನು 946 ಲಕ್ಷ ಬಾರಿ ಎತ್ತುತ್ತಾನೆ' ಹೊಗೆಯನ್ನು ಸೇವಿಸುವವನಾಗಿದ್ದಲ್ಲಿ 70400 ದೀಪದಕಡ್ಡಿಗಳನ್ನು ಹಚ್ಚು ತ್ತಾನೆ, ಲಂಡನ್ನಿನಿಂದ ಕಾರ್ಡಿಫ್‌ಗೆ ಇಷ್ಟು ದೂರ ನಡೆಯುತ್ತಾನೆ.

ಎಷ್ಟು ದೊಡ್ಡ ಮರ

ಪ್ರಪಂಚದಲ್ಲೆಲ್ಲಾ ದೊಡ್ಡ ಮರವು ಮೆಕ್ಸಿಕೋನಲ್ಲಿದೆ ; ಅದರ ವ್ಯಾಸ 5½ ಅಡಿ ; ಮತ್ತು ಎತ್ತರ 250 ಅಡಿ.

ಕತ್ತಲೆಯಿಂದ ಬೆಳಕಿಗೆ ! — ಮಹಮ್ಮನ್ಮಗಳ ಪಾತ್ರ

ನವದೆಹಲಿ— ' ಮಾನವ ಲೋಕವನ್ನು ಇಂದಿನ ಅಂಧಕಾರದಿಂದ ಪಾರು ಮಾಡಿ ದಿವ್ಯ ಪ್ರಕಾಶದತ್ತ ಕೊಂಡೊಯ್ಯಲು, ಭಾರತದಲ್ಲೆಲ್ಲಾ ನೆಲೆಗೊಂಡಿರುವ ಪಂಥ-ಮಾಸ್ತಗಳು, ಮಂದಿರಗಳು, ಧರ್ಮಸಾಂಸ್ಥಗಳು ಕೇವಲ ಸೇವಾ ಸಂಸ್ಕೃತಿ ತತ್ವಜ್ಞಾನಗಳ ಪ್ರಸಾರಕೇಂದ್ರಗಳಾಗಬೇಕು ; ಇಂತಹ ಸಾಂಸ್ಕೃತಿಕ ತಾತ್ವಿಕ ಮಹಾಜಾಗೃತಿ ಪ್ರಸಃ ನಮ್ಮಲ್ಲಿ ಬೆಳಗಬೇಕಾಗಿದೆ ' ಎಂಬದಾಗಿ ಏಪ್ರಿಲ್ ತಿಂಗಳಾಂತ್ಯದಲ್ಲಿ ಇಲ್ಲಿ ಕೂಡಿದ ಅ. ಭಾ. ಸಾಧುಗಳ ಸಮ್ಮೇಳನದಲ್ಲಿ ಖಾತನಾಡುತ್ತಾ ಶ್ರೀ ರಾಮ ಚೂಂ ಸ್ವಾಮಿಗಳು ಹೇಳಿದರು ; ಈ ಸಮ್ಮೇಳನಕ್ಕೆ ಸುಮಾರು ಮೂರು ಲಕ್ಷ ಜನರು ಬಂದಿದ್ದರೆಂದು ಹೇಳಲಾಗಿದೆ.

ರಣಜಿತ್ 11—5—51 ರಿಂದ

SAGAI ಸಗಾಯಿ

ರೆಹನಾ, ಯಾಕೂಬ್, ಪ್ರೇಮನಾಥ್, ಗೋಪ್ ಪಾತ್ರವಹಿಸಿರುವ

ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ಕೂಡಿದ ಅಮೋಘ-ಹಿಂದೀ ವಾಕ್ಚಿತ್ರ

— ಪ್ರತಿ ದಿನ 3 ಪ್ರದರ್ಶನಗಳು —



"ಗೋರಕ್ಷಣ".

ಕಾರ್ಯ ಎಲ್ಲೆಲ್ಲೂ ನಡೆಯಲಿ

ಉಡ್‌ಲ್ಯಾಂಡ್ಸ್

11—5—51 ರಿಂದ ಅಮೋಘ ಪ್ರಾರಂಭ

ಬಿರ್‌ಹ ಕಿ ರಾತ್ Birha ki Raat

ಪಾತ್ರ : ನರ್ಗಿಸ್, ದೇವಾನಂದ್, ಸ್ನೇಹಪ್ರಭಾ, ಓಂಪ್ರಕಾಶ್ (ಹಿಂದಿ ಚಿತ್ರ)

ಸಕಲರೂ ನೋಡಬೇಕಾದ ಮನಮೋಹಕ ಚಿತ್ರ — ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ

- ಪ್ರಬೋಧ -

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ
ಅಂಚೆಚೆಚ್ಚ ಸಮೇತ 1—14—0

ವುಡ್‌ಲ್ಯಾಂಡ್ಸ್ —
ಬೆಳಗಿನ ಪ್ರದರ್ಶನ
11—5—51 ರಿಂದ

ಧೂಮಕೇತು

ಪಾತ್ರ— ನಾದಿಯ, ಜೀವಕ್‌ಶವಾಸ್

(ರೋಮಾಂಚಕ ಹಿಂದಿ ಚಿತ್ರ)

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪರಸ್ಥಳಕ್ಕೆ ಅಂಚೆಚೆಚ್ಚ ಸೇರಿ 12 ಆಣೆ

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

Edited, Printed and Published by M. S. Krishna Rao, at the Satyavadi Press Chamrajpuram Mysore